ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಜ್ಯೋತಿ ಬೆಳಕುತಿದೆ

ಆಗಸ್ಟ್-ಸೆಪ್ಟೆಂಬರ್ 2021 ಸಂಪುಟ-15 ಸಂಚಿಕೆ-4

ದ್ವೈಪಪತ್ರಿಕೆ

ಕನ್ನಡ ರಾಜ್ಯೋತ್ಸವ

ಜ್ಯೋತಿ ಬೆಳಗುತಿದೆ

ವ್ಯವಸ್ಥಾಪಕ ನಿರ್ದೇಶಕರ ನುಡಿ

ಶಾಲಾ ಕಾಲೇಜುಗಳ ಮೇಲೆ ಹಾದು ಹೋಗುತ್ತಿರುವ ವಿದ್ಯುತ್ ಮಾರ್ಗಗಳ ತ್ವರಿತ ತೆರವು ಅಗತ್ಯ

ಶಾಲೆ ಮತ್ತು ಕಾಲೇಜುಗಳ ಆವರಣದ ಮೇಲೆ ಹಾದು ಹೋಗುತ್ತಿರುವ ವಿದ್ಯುತ್ ಮಾರ್ಗಗಳನ್ನು ಗುರುತಿಸಿ ಅವುಗಳನ್ನು ತುರ್ತಾಗಿ ತೆರವುಗೊಳಿಸಲು ಘನ ಉಚ್ಚ ನ್ಯಾಯಾಲಯ ಸೂಚಿಸಿದೆ. ಅಲ್ಲದೆ ಕ್ರಮವಹಿಸಿರುವ ಬಗ್ಗೆ ಮಾಹಿತಿಯನ್ನು ನವೆಂಬರ್-12 ರ ಒಳಗೆ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿದೆ.

ಹೀಗಾಗಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ಶಾಲೆ ಮತ್ತು ಕಾಲೇಜುಗಳ ಮೇಲೆ ಹಾದು ಹೋಗುತ್ತಿರುವ ವಿದ್ಯುತ್ ಮಾರ್ಗಗಳನ್ನು ಗುರುತಿಸಿ, ಅವುಗಳನ್ನು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ತುರ್ತು ಕ್ರಮ ಜರುಗಿಸುವುದು ಅಗತ್ಯ.

1980 ಕ್ಕೂ ಹಿಂದೆ ನಿರ್ಮಾಣಗೊಂಡ ಅರಣ್ಯ ಪ್ರದೇಶದಲ್ಲಿ ಹಾದು ಹೋಗಿರುವ ಪ್ರಸರಣ ಮಾರ್ಗಗಳ ಉನ್ನತೀಕರಣ/ಬಲವರ್ಧನೆ ಮಾಡುವ ಸಂದರ್ಭದಲ್ಲಿ, ಅರಣ್ಯ ಇಲಾಖೆಯ ಹೊಸ ಅನುಮೋದನೆಯ ಅಗತ್ಯವಿರುವುದಿಲ್ಲವೆಂದು ಕೇಂದ್ರ ಸರ್ಕಾರದ ಅರಣ್ಯ ಮಂತ್ರಾಲಯ ರವರ ಪತ್ರ ದಿನಾಂಕ: 06.09.2021 ರಲ್ಲಿ ತಿಳಿಸಿರುತ್ತಾರೆ. ಹೀಗಾಗಿ ಈಗಾಗಲೇ ಚಾಲನೆಯಲ್ಲಿರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದು.

ನಿಗಮವು ಈಗಾಗಲೇ ಕೃಷಿ ಪಂಪ್‌ಸೆಟ್‌ಗಳಿಗೆ 7 ತಾಸು ವಿದ್ಯುತ್ ಒದಗಿಸಲು ಕ್ರಮಕೈಗೊಂಡಿದ್ದು ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಕ್ರಮವಹಿಸುವುದು.

ಡಾ॥ ಎನ್.ಮಂಜುಳ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು ಕವಿಪ್ರನಿನಿ

ಅಧ್ಯಕ್ಷರ ನುಡಿ

ಗೃಹ ಪತ್ರಿಕೆಗೆ ಲೇಖನ ಹಾಗೂ ಸುದ್ದಿಯನ್ನು ಮಾಹೆಯಾನ ರವಾನಿಸಲು ಕೋರಿದೆ

ನಿಗಮದ ಸಂಯುಕ್ತ ಗೃಹ ಪತ್ರಿಕೆ 'ಜ್ಯೋತಿಬೆಳಗುತಿದೆ' ಯು ಕಳೆದ ಹಲವು ವರ್ಷಗಳಿಂದ ನಿರಂತರವಾಗಿ, ನಿಗಮದ ಹಿತದೃಷ್ಟಿಯಿಂದ, ನಿಗಮದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕೆಲಸ ನಿರ್ವಹಿಸುತ್ತಾ ಬರುತ್ತಿದೆ.

ಬಹುಮುಖ್ಯವಾಗಿ ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ, ಕನ್ನಡ ಕಳಕಳಿ, ಪ್ರತಿಭಾ ಶೋಧ, ಮಾನವ ಸಂಪನ್ಮೂಲ ಅಭಿವೃದ್ಧಿ, ಗಣ್ಯರ ಪರಿಚಯ, ಸಂದರ್ಶನಗಳು, ವಿದ್ಯಾರ್ಥಿ ಪ್ರತಿಭೆ, ನಿಗಮ ಕಂಪನಿಗಳ ಸಾಧನೆ, ವಿದ್ಯುತ್ ಯೋಜನೆಗಳು, ಆಧುನಿಕ ತಾಂತ್ರಿಕತೆ, ನಿಯಂತ್ರಣ ವ್ಯವಹಾರಗಳು ವಿದ್ಯುತ್ ರವಾನೆ ಕೇಂದ್ರದ ಸುದ್ದಿಗಳ ಜೊತೆಗೆ ವಿದ್ಯುತ್ ಕಳ್ಳತನಗಳ ಬಗ್ಗೆ ಜಾಗೃತಿ, ಗ್ರಾಹಕ ಪ್ರಭುಗಳಿಗೆ ಅರಿವು ನೀಡುವುದು ಅಲ್ಲದೆ ಮುನ್ನೆಚ್ಚರಿಕೆ ಕ್ರಮ, ವಿದ್ಯುತ್ ಅಪಘಾತ ತಗ್ಗಿಸುವ ನಿಟ್ಟಿನಲ್ಲಿ, ಸಾಮರ್ಥ್ಯ ಹೆಚ್ಚಿಸಿಕೊಳ್ಳಲು, ಭೌತಿಕಜ್ಞಾನ ವೃದ್ಧಿಸಲು ಪೂರಕವಾಗಿ ಕೆಲಸ ಮಾಡುವ ಜೊತೆಗೆ ಕನ್ನಡ ನಾಡು-ನುಡಿ, ಭಾಷಾಭಿಮಾನ, ಆಡಳಿತದಲ್ಲಿ ಕನ್ನಡ ಜಾರಿಗಾಗಿ ಲೇಖನಗಳು, ವಿವಿಧ ಪದಕೋಶಗಳ ಪ್ರಕಟಣೆ, ಸಿಬ್ಬಂದಿ ನೇಮಕಾತಿ, ಹೊಸ ಹೊಸ ಯೋಜನೆಗಳು, ಸಂಘ-ಸಂಸ್ಥೆಗಳ ಸುದ್ದಿ, ಅಧಿಕಾರಿ-ನೌಕರರ ನಡುವೆ ಉತ್ತಮ ಬಾಂಧವ್ಯ ಬೆಸೆಯುವ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ರಂಜನೆಯೊಂದಿಗೆ ಚಿಂತನೆಗೆ ಹಚ್ಚುವ, ಸಲಹೆ-ಸೂಚನೆಗಳಿಗೆ, ಪ್ರಶ್ನೋತ್ತರಗಳಿಗೆ ವೇದಿಕೆಯಾಗಿಯೂ ಹತ್ತು ಹಲವು ರೀತಿಯಲ್ಲಿ ಕೆಲಸ ಮಾಡುತ್ತಾ ಬರುತ್ತಿರುವುದು ತಿಳಿದ ವಿಷಯವಾಗಿದೆ.

ಗೃಹ ಪತ್ರಿಕೆಗೆ ಓದುಗರಾದ ನಿಮ್ಮಿಂದ ಈ ಮೇಲೆ ತಿಳಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ಇನ್ನಷ್ಟು ಉತ್ತಮ, ಕ್ರೀಯಾಶೀಲವಾದ ಹಾಗೂ ನಿಗಮದ ಮತ್ತು ರಾಜ್ಯ ವಿದ್ಯುತ್ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾದ ತಾಂತ್ರಿಕ ಲೇಖನಗಳನ್ನು, ಸುದ್ದಿಯನ್ನು ಮಾಹೆಯಾನ ಬರೆಯಲು ಹಾಗೂ ಬರೆಸಲು ಎಲ್ಲಾ ವಿಭಾಗಗಳ ಮುಖ್ಯಸ್ಥರು ಕ್ರಮವಹಿಸಲು ಕೋರುತ್ತೇನೆ.

ಜಿ.ಆರ್.ಚಂದ್ರಶೇಖರಯ್ಯ
ನಿರ್ದೇಶಕರು (ಪ್ರಸರಣ)
ಹಾಗೂ ಅಧ್ಯಕ್ಷರು, ಸಂಪಾದಕ ಮಂಡಳಿ, ಕವಿಪ್ರನಿನಿ

“ನಿಮ್ಮನ್ನು ನೀವು ಜಯಿಸಿ
ಆಗ ಇಡೀ ಜಗತ್ತೇ ನಿಮ್ಮದಾಗುವುದು”

ಜ್ಯೋತಿ ಬೆಳಗುವಿದೆ

ಪರಿವಿಡಿ

ವಿಷಯ	ಪುಟ ಸಂಖ್ಯೆ
ಕವಿಪ್ರನಿನಿ ಸುದ್ದಿ : ಉಪಕೇಂದ್ರಗಳು, ಪ್ರಸರಣ ಮಾರ್ಗಗಳು	4
ಮಾ.ಸಂ.ಅ.ಕೇ. : ಉದ್ಯೋಗ ಪೂರ್ವ ತರಬೇತಿಯ ವರದಿ	6
ಪಿಸಿಕೆಎಲ್ 2021-22ರ ಸಾಲಿನಲ್ಲಿ ಹೆಚ್ಚುವರಿ ವಿದ್ಯುತ್ ಮಾರಾಟ	7
ಕವಿಪ್ರನಿನಿ ಸುದ್ದಿ : ನಿಗಮದ ಪ್ರಮುಖ ಆದೇಶಗಳು	8
ಭಾರತ ರತ್ನ ಪ್ರಶಸ್ತಿ ಪುರಸ್ಕೃತರು : ಸರ್ ಎಂ.ವಿಶ್ವೇಶ್ವರಯ್ಯ	9
ಕ.ವಿ.ಕಾ. ಕನ್ನಡ ಸಂಘ	10
ಗಾಂಧೀಜಿ ಕುರಿತು ನೋಬೆಲ್ ಪ್ರಶಸ್ತಿ ಪುರಸ್ಕೃತರ ಅನಿಸಿಕೆ	11
ನಿಗಮದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯ ವರದಿ	12

ಸಂಪಾದಕ ಮಂಡಳಿ

ಶ್ರೀ ಜಿ.ಆರ್.ಚಂದ್ರಶೇಖರಯ್ಯ
ನಿರ್ದೇಶಕರು (ಪ್ರಸರಣ) ಹಾಗೂ
ಅಧ್ಯಕ್ಷರು, ಸಂಪಾದಕ ಮಂಡಳಿ, ಕವಿಪ್ರನಿನಿ

ಸದಸ್ಯರು :

ಶ್ರೀ ಮಹೇಶ್ ಕರ್ಜಗಿ, ಕ.ಆ.ಸೇ
ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ

ಶ್ರೀ ಎನ್.ವಿ.ಭುವನೇಶ್ವರಯ್ಯ
ಆರ್ಥಿಕ ಸಲಹೆಗಾರರು (ಲೆ. ಮತ್ತು ಸಂ.), ಕವಿಪ್ರನಿನಿ

ಶ್ರೀ ಬಿ.ಆರ್.ಮಂಜುನಾಥ್
ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)

ಶ್ರೀ ಆರ್.ಮುಕುಂದ
ಲೆಕ್ಕಾಧಿಕಾರಿ (ಸಾರ್ವಜನಿಕ ಸಂಪರ್ಕ), ಕವಿಪ್ರನಿನಿ

ಶ್ರೀಮತಿ ತನುಜ ಟಿ.ಎಚ್.
ನಿರ್ದೇಶಕರು (ಪ್ರಸರಣ)
ಇವರ ಕಾರ್ಯನಿರ್ವಾಹಕ ಸಹಾಯಕರು

ಡಾ. ಎ.ಆರ್.ಗೋವಿಂದಸ್ವಾಮಿ
ಸಹ ಸಂಪಾದಕರು

ವಿಶೇಷ ಆಹ್ವಾನಿತರು :

ಶ್ರೀ ಎಸ್.ಆರ್.ರಾಜಾನಾಯಕ್
ಪ್ರಧಾನ ಕಾರ್ಯದರ್ಶಿ, ಕವಿಪ್ರನಿನೌ ಸಂಘ

ಶ್ರೀ ಕೆ. ತಿಪ್ಪೇಸ್ವಾಮಿ
ಪ್ರಧಾನ ಕಾರ್ಯದರ್ಶಿ, ಕ.ವಿ.ಮಂ.ಇಂ.ಸಂ.

ಶ್ರೀ ಜಿ.ಗುರುಲಿಂಗಯ್ಯ
ಪ್ರಧಾನ ಕಾರ್ಯದರ್ಶಿ, ಪ.ಜಾ./ಪ.ಪಂ.ಗಳ ಕಲ್ಯಾಣ ಸಂಸ್ಥೆ

ಶ್ರೀ ಕೆ.ರಾಮಚಂದ್ರ ರೆಡ್ಡಿ
ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ.ಲೆ.ಅ. ಸಂಘ

ಶ್ರೀ ಮನೋಜ್‌ಕುಮಾರ್
ಪ್ರಧಾನ ಕಾರ್ಯದರ್ಶಿ, ಡಿಪ್ಲೋಮಾ ಇಂಜಿನಿಯರುಗಳ ಸಂಘ

ಶ್ರೀ ಎಂ.ರವೀಂದ್ರ
ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ
ಪ.ಜಾ./ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು.

ವಿದ್ಯುತ್ ಉಪಕೇಂದ್ರಗಳು ಮತ್ತು ಪ್ರಸರಣ ಮಾರ್ಗಗಳು

31-07-2021 ರಂತೆ

ವೋಲ್ಟೇಜ್ ವರ್ಗ	ವಿದ್ಯುತ್ ಉಪಕೇಂದ್ರಗಳು	ಸಾಮರ್ಥ್ಯ (ಎಂ.ವಿ.ಎ ಗಳಲ್ಲಿ)	ಪ್ರಸರಣ ಮಾರ್ಗ (ಸರ್ಕ್ಯೂಟ್ ಕಿ.ಮೀ.ಗಳಲ್ಲಿ)
400 ಕೆ.ವಿ	8	8075	3701
220 ಕೆ.ವಿ	114	26577	12191
110 ಕೆ.ವಿ	449	14746	11205
66 ಕೆ.ವಿ	695	19099	11807
ಒಟ್ಟು	**1266**	**68497**	**38905**

01 ಸಂಖ್ಯೆಯ 765 ಕೆ.ವಿ PGCIL ಕೇಂದ್ರಗಳು
12 ಸಂಖ್ಯೆಯ 400 ಕೆ.ವಿ PGCIL ಕೇಂದ್ರಗಳು

ಗರಿಷ್ಠ ಮತ್ತು ಸರಾಸರಿ ವಿದ್ಯುತ್ ಬಳಕೆ – 2006–2021



ವಿವರಗಳು	2018-19	2019-20	2020-21
ಅತ್ಯಧಿಕ ವಿದ್ಯುತ್ ಬಳಕೆ	259.15 ಎಂಯು 27-ಮಾರ್ಚ್-2019	259.21 ಎಂಯು 13-ಮಾರ್ಚ್-2020	**275.27 ಎಂಯು 27-ಮಾರ್ಚ್-2021**
ಗರಿಷ್ಠ ಬೇಡಿಕೆ	12881 ಮೆ.ವ್ಯಾಟ್ 29-ಮಾರ್ಚ್-2019	13258 ಮೆ.ವ್ಯಾಟ್ 16-ಮಾರ್ಚ್-2020	**14367 ಮೆ.ವ್ಯಾಟ್ 26-ಮಾರ್ಚ್-2021**

ಪ್ರಸರಣ ನಷ್ಟ (2002–03 ರಿಂದ 2020–21 ರವರೆಗೆ)



KERC Target 2020-21	ಗರಿಷ್ಠ ಮಟ್ಟ	ಸರಾಸರಿ	ಕನಿಷ್ಠ ಮಟ್ಟ
	3.089	3.039	2.989

Loss reduction will be achieved by:

- Adding 30 substations & Transmission lines
- Adding and maintaining Capacitor banks
- Addressing reactive power compensation

ಪ್ರಸರಣ ಜಾಲದ ಲಭ್ಯತೆ (2014–15 ರಿಂದ 2020–21 ರವರೆಗೆ)



ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಉದ್ಯೋಗ ಪೂರ್ವ ತರಬೇತಿಯ ಉದ್ಘಾಟನಾ ಸಮಾರಂಭದ ವರದಿ

ದಿನಾಂಕ 23.08.2021 ರಂದು ಕವಿಪ್ರನಿನಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಿರಿಯ ಇಂಜಿನಿಯರ್(ವಿ) ಮತ್ತು ಕಿರಿಯ ಸಹಾಯಕರಿಗೆ ಉದ್ಯೋಗ ಪೂರ್ವ ತರಬೇತಿಯ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಮಹೇಶ ಕರ್ಜಗಿ. ಕೆ.ಎಸ್, ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ಇವರು ವಹಿಸಿಕೊಂಡಿದ್ದರು. ಈ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ **ಶ್ರೀಮತಿ ಡಾ. ಎನ್. ಮಂಜುಳ,** ಐ.ಎ.ಎಸ್, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ಇವರ ಉಪಸ್ಥಿತಿಯಲ್ಲಿ ನಡೆಯಿತು. ಈ ವೇದಿಕೆಯಲ್ಲಿ **ಶ್ರೀ ಎಂ.ಎಲ್. ನಾಗರಾಜ್,** ಆಡಳಿತಾಧಿಕಾರಿ, ಮಾ.ಸಂ.ಅ. ಕೇಂದ್ರ, ಕವಿಪ್ರನಿನಿ, ಹೂಡಿ ಇವರು ಆಸೀನರಾಗಿದ್ದರು.

ಈ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಲಾಯಿತು. ತರಬೇತ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ಡಾ. ಎನ್. ಮಂಜುಳ ರವರು, ಸರ್ಕಾರದ ಕೆಲಸ ದೇವರ ಕೆಲಸ ಎಂದು ಪ್ರತಿಯೊಬ್ಬ ಸಿಬ್ಬಂದಿಯು ಅರಿತುಕೊಂಡು ಕೆಲಸ ಮಾಡಬೇಕು. ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡುವ ನಮ್ಮ ಇಲಾಖೆಯ ಬಗ್ಗೆ ಹೆಮ್ಮೆ ಇರಬೇಕು. ನಿಷ್ಠೆಯಿಂದ ಮತ್ತು ಜವಾಬ್ದಾರಿಯಿಂದ ಸೇವೆಯನ್ನು ಸಲ್ಲಿಸಬೇಕು. ಸಿಬ್ಬಂದಿಯು ತಮ್ಮ ಆರೋಗ್ಯದ ಕಡೆಗೂ ಗಮನ ಹರಿಸಬೇಕು. ತರಬೇತಿಗೆ ಒಳಗಾದ ಶಿಬಿರಾರ್ಥಿಗಳು ಇಲ್ಲಿಂದ ಬದಲಾವಣೆ ಹೊಂದಿ ಹೋಗಬೇಕು ಎಂದು ವಿವೇಕಾನಂದರ ಹಿತನುಡಿಯೊಂದಿಗೆ ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಅಧ್ಯಕ್ಷೀಯ ನುಡಿಯಲ್ಲಿ **ಶ್ರೀ ಮಹೇಶ ಕರ್ಜಗಿ,** ಕೆ.ಎ.ಎಸ್, ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ಇವರು ಜ್ಞಾನವು ಮನುಷ್ಯನಿಗೆ ಶಕ್ತಿಶಾಲಿಯಾಗಿದೆ. ಜ್ಞಾನವು ಹರಿಯುವ ನೀರಿನಂತೆ ಇರಬೇಕು. ಅಂದರೆ ಒಳ್ಳೆಯದಕ್ಕೆ ಹಂಚಿಕೆಯಾಗಬೇಕು. ನಮ್ಮ ಇಲಾಖೆಯು ರಾಜ್ಯದಲ್ಲಿಯೇ ಅತ್ಯುತ್ತಮ ಇಲಾಖೆಯಾಗಿದೆ. ಇಂತಹ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಯು ಕ್ರಿಯಾಶೀಲರಾಗಿರಬೇಕು. ಈ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೀವೆಲ್ಲರೂ ಧನ್ಯರು, ಭಗವಂತನು ನಿಮಗೆ ಸೇವೆ ಸಲ್ಲಿಸಲು ಅವಕಾಶ ನೀಡಿರುವುದರಿಂದ ನಿಷ್ಠೆ, ಶ್ರದ್ಧೆಯಿಂದ ಸೇವೆಯನ್ನು ಸಲ್ಲಿಸಿ ಎಂದು ನೇಮಕಗೊಂಡ ಎಲ್ಲಾ ಶಿಬಿರಾರ್ಥಿಗಳಿಗೆ ಶುಭ ಕೋರಿದರು.

ಈ ಸಮಾರಂಭದ ಸಂಪೂರ್ಣ ಉಸ್ತುವಾರಿ / ಜವಾಬ್ದಾರಿಯನ್ನು ಶ್ರೀ ನಾಗರಾಜ್. ಎಂ.ಎಲ್, ಆಡಳಿತಾಧಿಕಾರಿ, ಮಾ.ಸಂ.ಅ. ಕೇಂದ್ರ, ಕವಿಪ್ರನಿನಿ, ಹೂಡಿ ರವರು ತೆಗೆದುಕೊಂಡು ಸಮಾರಂಭವು ಅತ್ಯುತ್ತಮವಾಗಿ ಮೂಡಿ ಬರಲು ಕಾರಣರಾದರು. ಇವರ ಜೊತೆಯಲ್ಲಿ ಮಾ.ಸಂ.ಅ. ಕೇಂದ್ರದ ಸಿಬ್ಬಂದಿಯು ಹಾಜರಿದ್ದು, ಈ ಸಮಾರಂಭವು ಯಶಸ್ವಿಯಾಗಲು ಕಾರಣರಾದರು. ಈ ಉದ್ಘಾಟನಾ ಸಮಾರಂಭವು ದೇವರ ಸ್ತುತಿಯೊಂದಿಗೆ ಪ್ರಾರಂಭವಾಯಿತು. ಪ್ರಾರ್ಥನೆಯನ್ನು ಶ್ರೀಮತಿ ಕಲಾವತಿ. ಎಸ್, ಸ.ಕಾ.ನಿ.ಇಂ (ವಿ) ಯವರು, ಸೇರಿದ ಎಲ್ಲರಿಗೂ ಸ್ವಾಗತವನ್ನು ಶ್ರೀ ಹೆಚ್.ಎಸ್. ಸೋಮಶಂಕರ, ಉಪ ನಿಯಂತ್ರಣಾಧಿಕಾರಿ (ತ & ಕ್ರೀ) ಯವರು, ಮಾ.ಸಂ.ಅ. ಕೇಂದ್ರದ ಸಂಕ್ಷಿಪ್ತ ವರದಿಯನ್ನು ಶ್ರೀ ಸಿ.ವಿ. ಬ್ಯಾಹಟ್ಟಿಮಠ, ಲೆಕ್ಕಾಧಿಕಾರಿ (ತರಬೇತಿ) ರವರು, ವಂದನಾರ್ಪಣೆಯನ್ನು ಶ್ರೀಮತಿ ಕಾಂತಾಮಣಿ. ಎಲ್, ಕಾ.ನಿ.ಇಂ (ವಿ) ರವರು, ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ರಾಮು ರವರು ನಡೆಸಿಕೊಟ್ಟರು. ವೇದಿಕೆಯ ಜವಾಬ್ದಾರಿಯನ್ನು ಶ್ರೀಮತಿ ಅಜ್ರತಾಜ್ ಡಿ. ನಾಯ್ಕರ್ ರವರು ಮತ್ತು ಎಲ್ಲಾ ಸಿಬ್ಬಂದಿಯು ವಹಿಸಿಕೊಂಡು ಸಮಾರಂಭವು ಯಶಸ್ವಿಯಾಗಲು ಕಾರಣರಾದರು.

ಕೊನೆಯಲ್ಲಿ ಮಾ.ಸಂ.ಅ. ಕೇಂದ್ರದಲ್ಲಿಯ ಆವರಣದಲ್ಲಿ ಶ್ರೀಮತಿ ಡಾ. ಎನ್. ಮಂಜುಳ, ಐ.ಎ.ಎಸ್, ವ್ಯವಸ್ಥಾಪಕ ನಿರ್ದೇಶಕರು ಗಂಧದ ಸಸಿಯನ್ನು ಶ್ರೀ ಮಹೇಶ್ ಕರ್ಜಗಿ, ಕೆ.ಎ.ಎಸ್, ನಿರ್ದೇಶಕರು (ಆ ಮತ್ತು ಮಾ.ಸಂ) ರವರು ಹಾಗೂ ಶ್ರೀ ನಾಗರಾಜ್. ಎಂ.ಎಲ್ ಆಡಳಿತಾಧಿಕಾರಿ ಯವರು ವಿವಿಧ ಬಗೆಯ ಸಸಿಗಳನ್ನು ನೆಟ್ಟು ಪರಿಸರ ಕಾಳಜಿ ತೋರಿಸುವುದರ ಮೂಲಕ ಸಮಾರಂಭವು ಮುಕ್ತಯವಾಗಿತು.

ವರದಿ : **ಶ್ರೀ ಸಿ.ವಿ. ಬ್ಯಾಹಟ್ಟಿಮಠ,** ಲೆಕ್ಕಾಧಿಕಾರಿ (ತರಬೇತಿ)
ಕವಿಪ್ರನಿನಿ

ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ PCKL

ಆರ್ಥಿಕ ವರ್ಷ 2019-20, 20-21 ಮತ್ತು 21-22 ರ ಸಾಲಿನಲ್ಲಿ ನವೀಕರೀಸಿದ ಇಂಧನ ಮೂಲಗಳಿಂದ (RE) ವಿದ್ಯುತ್ ಪ್ರಮಾಣವನ್ನು ರಾಜ್ಯದ ವಿದ್ಯುತ್ ರವಾನೆ ಕೇಂದ್ರದ (SLDC) ವ್ಯಾಪ್ತಿಯಲ್ಲಿ ಕಡಿತಗೊಳಿಸಿದ ವಿವರಗಳು:

ಶ್ರೀ ವಿ.ಕೃಷ್ಣಪ್ಪ
ವ್ಯವಸ್ಥಾಪಕ ನಿರ್ದೇಶಕರು, ಪಿಸಿಕೆಎಲ್.



2019-20 ಸಾಲಿನಲ್ಲಿ 178 ಮಿ.ಯೂನಿಟ್‌ಗಳು ಮತ್ತು 2020-21 ಸಾಲಿನಲ್ಲಿ 22.47 ಮಿ.ಯೂಟ್‌ಗಳಷ್ಟು ಖಇ ಹೆಚ್ಚುವರಿ ವಿದ್ಯುತ್‌ನ ಪ್ರಮಾಣವನ್ನು ಕಡಿಮೆಗೊಳಿಸಲಾಗಿತ್ತು (RE Energy Curtailment). ಹಿಂದಿನ ಸಾಲಿನ ಖಇ ವಿದ್ಯುತ್ತನ್ನು ಕಡಿತಕ್ಕೆ ಹೋಲಿಸದಲ್ಲಿ ಪ್ರಸಕ್ತ ಸಾಲಿನಲ್ಲಿ (11.7 ಮಿ.ಯೂನಿಟ್‌ಗಳು) ಖಇ ವಿದ್ಯುತ್ ಕಡಿತವನ್ನು ಗಣನೀಯವಾಗಿ ಕಡಿಮೆಗೊಳಿಸಲಾಗಿರುತ್ತದೆ ಹಾಗೂ ಕಳೆದ ಏಪ್ರಿಲ್ 21ರ ಮಾಹೆಯಿಂದ ರಾಜ್ಯದಲ್ಲಿನ ಹೆಚ್ಚುವರಿ ವಿದ್ಯುತ್ತನ್ನು (Majority RE Power) ವಿದ್ಯುತ್ ವಿನಿಮಯ ಕೇಂದ್ರ (IEX) ಮುಖಾಂತರ ಹಾಗೂ ಇತರ ರಾಜ್ಯಗಳಿಗೆ ಇಲ್ಲಿಯವರೆಗೆ 5578.86 ಮಿ.ಯೂ. ವಿದ್ಯುತ್ತನ್ನು ರೂ.2223.78/- ಕೋಟಿಗಳಿಗೆ (Amount Realised) ಮಾರಾಟ ಮಾಡಲಾಗಿದ್ದು, ಸದರಿ ಮೊತ್ತವನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸಂದಾಯ ಮಾಡಲಾಗಿರುವುದು, ರಾಜ್ಯದ ಹೆಗ್ಗಳಿಕೆಯಾಗಿರುತ್ತದೆ.

ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಎಲ್ಲಾ ಗ್ರಾಹಕರಿಗೆ ವಿದ್ಯುತ್ ಪೂರೈಕೆ ಮಾಡುವುದರ ಜೊತೆಗೆ, ಲಭ್ಯವಿರುವ ಹೆಚ್ಚುವರಿ ವಿದ್ಯುತ್ತನ್ನು ಮಾತ್ರ ಪಿಸಿಕೆಎಲ್ ಕಂಪನಿಯು ವಿದ್ಯುತ್ ವಿನಿಮಯ ಕೇಂದ್ರದ ಮೂಲಕ ಮಾರಾಟ ಮಾಡುತ್ತದೆ.

ಪ್ರಕಟಣೆ: ಪಿಸಿಕೆಎಲ್, ಬೆಂಗಳೂರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸುತ್ತೋಲೆ

ವಿಷಯ : ನಿಗಮದಲ್ಲಿ ಸಂಪರ್ಕ ರಹಿತ ಹಾಜರಾತಿ ನಿರ್ವಹಣಾ ವ್ಯವಸ್ಥೆ ಮತ್ತು ಮಾನವ ಸಂಪನ್ಮೂಲ ಮಾಹಿತಿ ನಿರ್ವಹಣಾ ತಂತ್ರಾಂಶವನ್ನು ಅನುಷ್ಠನಗೊಳಿಸುವ ಬಗ್ಗೆ.

ಉಲ್ಲೇಖ : 1. ನಿಗಮದ ಕಾರ್ಯಾದೇಶ (ಡಿ.ಡಬ್ಯ್ಯೂಎ) ಸಂಖ್ಯೆ : ಬಿ31/ಅಇಂ(ವಿ)/(ಐಟಿ)/ ಕಾನಿಇಂ(ವಿ)(ಐಟಿ-1)/ಸಕಾನಿಇಂ(ವಿ-2/1382/2021-22 ದಿ:07.07.2021
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)ರವರ ಟಿಪ್ಪಣಿ ದಿನಾಂಕ : 26.07.2021

ಪ್ರಸ್ತುತ ವ್ಯಾಪಕವಾಗಿರುವ ಕೋವಿಡ್-19 ಸೋಂಕಿನ ಹಿನ್ನೆಲೆಯಲ್ಲಿ, ನಿಗಮದ ಸಿಬ್ಬಂದಿಯ ಆರೋಗ್ಯದ ಹಿತದೃಷ್ಟಿಯಿಂದ ರಾಜ್ಯದಾದ್ಯಂತ ಕವಿಪ್ರನಿನಿಯ ಎಲ್ಲಾ ಕಛೇರಿಗಳಲ್ಲಿ ಸಂಪರ್ಕ ರಹಿತ ಹಾಜರಾತಿ ನಿರ್ವಹಣೆ ವ್ಯವಸ್ಥೆಯನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಈ ದಿಶೆಯಲ್ಲಿ ಜಾರಿಗೆ ಬರಲಿರುವ ತಂತ್ರಾಂಶವು ಮಾನವ ಸಂಪನ್ಮೂಲ ಮಾಹಿತಿ ನಿರ್ವಹಣೆ ವ್ಯವಸ್ಥೆಯನ್ನು ಕೂಡ ಒಳಗೊಂಡಿದ್ದು ಸಿಬ್ಬಂದಿಯು ಹಾಜರಾತಿ, ವಿವಿಧ ರಜೆ ಖಾತೆಗಳ ನಿರ್ವಹಣೆ, ವೇತನ ಹಾಗೂ ವಿವಿಧ ಭತ್ಯೆಗಳ ಮಾಹಿತಿಯ ನಿರ್ವಹಣೆ ಮತ್ತು ಸಿಬ್ಬಂದಿ ಇನ್ನಿತರೆ ಮೂಲಭೂತ ಮಾಹಿತಿಗಳನ್ನು ನಿರ್ವಹಿಸಲು ಅವಶ್ಯಕವಾಗಿರುತ್ತದೆ. ಉದ್ದೇಶಿತ ಹಾಜರಾತಿ ನಿರ್ವಹಣೇ ವ್ಯವಸ್ಥೆಯ ತಂತ್ರಾಂಶದನ್ವಯ ನಿಗಮದ ಸಿಬ್ಬಂದಿ ಮೊಬೈಲ್ ಫೋನ್‌ಗಳ ಮೂಲಕ ಅವರ ಹಾಜರಾತಿಯನ್ನು ದಾಖಲಿಸಬಹುದಾಗಿರುತ್ತದೆ. ಸದರಿ ವ್ಯವಸ್ಥೆಯನ್ನು ಜಾರಿಗೆ ತರಲು ನಿಗಮದ ಸಿಬ್ಬಂದಿಯ ಎಲ್ಲಾ ಅವಶ್ಯಕ ಮಾಹಿತಿಗಳನ್ನು ತಂತ್ರಾಂಶದಲ್ಲಿ ನಮೂದಿಸಬೇಕಾಗಿರುತ್ತದೆ

ಹಾಜರಾತಿಯ ದಾಖಲಾತಿ ಮತ್ತು ರಜೆ, ವೇತನ ವಿವರಗಳ ನಿರ್ವಹಣೆಗಾಗಿ ದತ್ತಾಂಶವನ್ನು ಸೂಚಿಸಲು ಅನುವಾಗುವಂತೆ ನಿಗದಿತ ನಮೂನೆಯನ್ನು ಒಳಗೊಂಡ ಎಕ್ಸೆಲ್ ಶೀಟ್ ಅನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ. ಕವಿಪ್ರನಿನಿಯ ಎಲ್ಲಾ ವೇತನ ಬಟವಾಡೆ ಅಧಿಕಾರಿಗಳಗ ಸದರಿ ಎಕ್ಸೆಲ್ ಶೀಟ್‌ನಲ್ಲಿ ದಿನಾಂಕ 01-08-2021 ರಂದಿಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಮಾಹಿತಿಯನ್ನು ಭರ್ತಿಮಾಡಿ ದಿನಾಂಕ 06-08-2021 ರೊಳಗಾಗಿ ತಪ್ಪದೇ ಅನುಬಂಧದಲ್ಲಿ ನಮೂದಿಸಲಾಗಿರುವ ಈ-ಮೇಲ್ ವಿಳಾಸಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಮಾಹಿತಿಗಳನ್ನು ನಮೂದಿಸುವಲ್ಲಿ ಸಂದೇಹ/ಸ್ಪಷ್ಟೀಕರಣಗಳ ವಿಷಯವಾಗಿ ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಗಳು ತಮ್ಮ ಮೊಬೈಲ್ ಸಂಖ್ಯೆಯೊಂದಿಗೆ ಅನುಬಂಧದಲ್ಲಿ ನಮೂದಿಸಲಾಗಿರುವ ಈ-ಮೇಲ್ ವಿಳಾಸಕ್ಕೆ ಸಂಪರ್ಕಿಸಬಹುದಾಗಿದೆ. ಎಕ್ಸೆಲ್ ಸೀಟ್‌ನಲ್ಲಿ ಮಾಹಿತಿಯನ್ನು ಭರ್ತಿ ಮಾಡಲು ಅನುಸರಿಸಬೇಕಾದ ಸೂಚನೆಗಳನ್ನು ಈ ಸುತ್ತೋಲೆಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಲಾಗಿದೆ.

ಸಹಿ/-
ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ಕವಿಪ್ರನಿನಿ

ಭಾರತ ರತ್ನ ಪ್ರಶಸ್ತಿ ಪುರಸ್ಕೃತರು

ಮೋಕ್ಷ ಗುಂಡಂ ವಿಶ್ವೇಶ್ವರಯ್ಯ (1955 ರಲ್ಲಿ ಪುರಸ್ಕೃತರು)

(..... ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ವಿಶ್ವ ವಿಖ್ಯಾತ **ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು** ಜನತೆ ಪ್ರೀತಿಯಿಂದ ಕರೆಯುವ ಹೆಸರು. **ಸರ್.ಎಂ.ವಿ.** ಎಂದೇ. ಈ ಜ್ಞಾನದ ಖಣಿ, ದೇಶ–ವಿದೇಶಗಳಲ್ಲಿ ತನ್ನ ಪಾಂಡಿತ್ಯ ಪಸರಿಸಿ, ನಾಡಿಗೆ ಕೀರ್ತಿ ತಂದ ಮಹನೀಯರು. ಎಷ್ಟೇ ಔನತ್ಯಕ್ಕೇರಿದರೂ ತಮ್ಮದೇ ಸರಳ ಜೀವನ ಶೈಲಿಯಲ್ಲಿ ಬದುಕಿ ಆದರ್ಶ, ಮೌಲ್ಯಗಳನ್ನು ಕೊಡುಗೆಯಾಗಿ ನೀಡಿ ಚಿರಸ್ಥಾಯಿಯಾದ ಮೇರು ಪುರುಷರು. ಈ ಜ್ಞಾನ ಕ್ಷಿತಿಜವನ್ನು ಹರಿಬಿಟ್ಟು ಇಂದಿಗೂ ಶಾಶ್ವತವಾಗಿ ಹೆಸರು ಉಳಿಯುವಂತ ಕಾರ್ಯಗಳನ್ನು ಸಾಧಿಸುವುದರಿಂದಲೇ ಇವರಿಗೆ ಅಗ್ರ ತಾಂಬೂಲ ಸಂದಿದೆ.

ಈ ಮೇರು ಪುರುಷ ಜನಿಸಿದ್ದು ಸೆಪ್ಟೆಂಬರ್ 15, 1860 ರಂದು. ಭಾರತೀಯ ಇಂಜಿನಿಯರುಗಳಲ್ಲಿ ಶ್ರೇಷ್ಠತೆ ಮೆರೆದು ವಿಶ್ವ ಭೂಪಟದಲ್ಲಿ ಹೆಜ್ಜೆ ಗುರುತುಗಳನ್ನು ಬಿಟ್ಟಿದ್ದಾರೆ. ಇಂಥ ಮೇಧಾವಿ ವ್ಯಕ್ತಿಗೆ ದೇಶದ ಪ್ರತಿಷ್ಠಿತ ನಾಗರಿಕ ಪ್ರಶಸ್ತಿ 'ಭಾರತ ರತ್ನ' ದೊರೆತಿದ್ದು 1955 ರಲ್ಲಿ ಇವರ ಅನುಪಮ ಸೇವೆಯನ್ನು ಪರಿಗಣಿಸಿ, ಸಾರ್ವಜನಿಕ ರಂಗಕ್ಕೆ ಕೊಡುಗೆ ನೀಡಿದ್ದಕ್ಕೆ ಬ್ರಿಟಿಷರು 'ನೈಟ್' ಪದವಿ ನೀಡಿ ಗೌರವಿಸಿದ್ದಾರೆ. ಇಂದಿಗೂ ಪ್ರತಿ ವರ್ಷ ಸೆಪ್ಟೆಂಬರ್ 15 ರಂದು ದೇಶದಾದ್ಯಂತ **'ಇಂಜನಿಯರ್ ದಿವಸ'** ಎಂದು ಆಚರಿಸಲಾಗುವದು.

ಶ್ರೀನಿವಾಸ ಶಾಸ್ತ್ರೀ ಹಾಗೂ ವೆಂಕಟಮ್ಮ ಎಂಬ ದಂಪತಿಗಳಿಗೆ ಸರ್.ಎಂ.ವಿ. ಜನಿಸಿದರು. ಕರ್ನಾಟಕದ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲೂಕಿನ ಮುದ್ದೇನಹಳ್ಳಿ ಗ್ರಾಮವು ಇವರ ಮೂಲ ಊರು. ಆಗ ಇದು ಮೈಸೂರು ರಾಜರ ಆಡಳಿತಕ್ಕೆ ಒಳಪಟ್ಟಿತ್ತು. ಇವರ ತಂದೆ ಶ್ರೀನಿವಾಸ ಶಾಸ್ತ್ರಿಯವರು ಸಂಸ್ಕೃತ ವಿದ್ವಾನ್‌ರು ಹಾಗೂ ಹಿಂದೂ ಗ್ರಂಥಗಳ ಬಗ್ಗೆ ಆಳವಾದ ಅಭ್ಯಾಸ ಮಾಡಿದ್ದರು. ಅಲ್ಲದೇ ಆಯುರ್ವೇದ ವೈದ್ಯಕೀಯವನ್ನು ವೃತ್ತಿಯನ್ನಾಗಿರಿಸಿಕೊಂಡಿದ್ದರು. ಇದೊಂದು ಬ್ರಾಹ್ಮಣ ವರ್ಗದ ಸಾತ್ವಿಕ ಕುಟುಂಬವಾಗಿತ್ತು. ವೈದಿಕಿ ಮುಲಕನಾಡು ಎಂಬ ಒಳಪಂಗಡಕ್ಕೆ ಸೇರಿದ್ದರು.

ಇಂದಿನ ಆಂಧ್ರ ಪ್ರದೇಶಕ್ಕೆ ಸೇರಿದ ಪ್ರಕಾಶಂ ಜಿಲ್ಲೆಯ ಗಿದ್ದಲೂರು ಎಂಬ ಊರಿನ ಸಮೀಪದ ಮೋಕ್ಷ ಗುಂಡಂ ಎಂಬ ಊರು ಇವರ ಪೂರ್ವಜರ ವಾಸಸ್ಥಾನವಾಗಿತ್ತು. ಮೂರು ಶತಮಾನಗಳ ಹಿಂದೆಯೇ ಅವರು ಮೈಸೂರು ಪ್ರಾಂತಕ್ಕೆ ವಲಸೆ ಬಂದಿದ್ದರು. ಹೀಗಾಗಿ **ಮೋಕ್ಷ ಗುಂಡಂ** ಎಂಬ ಹೆಸರು ಖಾಯಂ ಆಗಿ ಉಳಿಯಿತು.

ಕೇವಲ 15 ವರ್ಷದವರಿರುವಾಗಲೇ ಇವರು ತಂದೆಯನ್ನು ಕಳೆದುಕೊಂಡರು. ಅವಾಗ ಇವರ ಕುಟುಂಬವು ಕರ್ನೂಲದಲ್ಲಿ ನೆಲೆಗೊಂಡಿತ್ತು. ಈ ಅವಗಢದಿಂದ ಕುಟುಂಬ ತತ್ತರಿಸಿತ್ತು. ಅಲ್ಲಿಂದ ಮುಂದೆ ನೇರವಾಗಿ ಮುದ್ದೇನಹಳ್ಳಿಗೆ ಮರಳಿದರು.

ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಚಿಕ್ಕಬಳ್ಳಾಪುರದಲ್ಲಿ ಮತ್ತು ಪ್ರೌಢ ಶಿಕ್ಷಣವನ್ನು ಬೆಂಗಳೂರಿನಲ್ಲಿ ಪೂರೈಸಿದರು. 1881 ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿ ಪಡೆದರು. ಪುಣೆಯ ವಿಜ್ಞಾನ ಕಾಲೇಜಿನಲ್ಲಿ ಸಿವಿಲ್ ಇಂಜನಿಯರಿಂಗ್ ಆಯ್ದುಕೊಂಡರು.

ಇಂಜಿನಿಯರರಿಂಗ್ ಪದವಿ ಗಳಿಸಿದ ನಂತರ ವಿಶ್ವೇಶ್ವರಯ್ಯನವರು ಬಾಂಬೆ ಸರಕಾರದ ಲೋಕೋಪಯೋಗಿ ಇಲಾಖೆಗೆ ಸೇರಿದರು. ನಂತರ ಇವರಿಗೆ ಭಾರತೀಯ ನೀರಾವರಿ ಕಮೀಶನ್‌ಗೆ ಕರೆ ಬಂದಿತು. ದಕ್ಷಿಣ ಭಾಗದಲ್ಲಿ ನೀರಾವರಿ ಇಲಾಖೆಯಲ್ಲಿ ಭಾರಿ ಸುಧಾರಣೆಯನ್ನು ಮಾಡಿದರು. ಪುಣೆಯ ಹತ್ತಿರ ಖಡಕ್‌ವಾಸ್ಲಾದಲ್ಲಿ ಅಣೆಕಟ್ಟನ್ನು ನೂತನವಾಗಿ ನಿರ್ಮಿಸಿ ಯಶಸ್ವಿಯಾದರು. ಅಣೆಕಟ್ಟಿಗೆ ಯಾವುದೇ ಹಾನಿಯಾಗದಂತೆ ಮಹಾಪೂರ ಸಂಭವಿಸಿದಾಗ ರಕ್ಷಣೆಗಾಗಿ ನಿರ್ಮಿಸಿದ ಗೇಟುಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಿದ್ದರಿಂದ, ಇದೇ ವ್ಯವಸ್ಥೆಯನ್ನು ಗ್ವಾಲಿಯರ್‌ನ ತಿಗ್ರಿ ಡ್ಯಾಮಿಗೆ ಅಳವಡಿಸಿದರು ಮತ್ತು ಮೈಸೂರಿನ ಕೆ.ಆರ್.ಎಸ್. ಡ್ಯಾಮಿಗೂ ಅನ್ವಯಿಸಿದರು.

ಕೆ.ಆರ್.ಎಸ್. ಅಣೆಕಟ್ಟನ್ನು ಕಟ್ಟುವಾಗ ಅದರ ಪ್ರಾರಂಭದಿಂದ ಹಿಡಿದು ಕೊನೆ ತಲುಪಿ, ಶುಭಾರಂಭವಾಗುವವರೆಗೂ ಸಮಸ್ತ ಉಸ್ತುವಾರಿಯನ್ನು ತಾವೇ ನಿರ್ವಹಿಸಿದರು. ಏಷ್ಯ ಖಂಡದಲ್ಲಿಯೇ ಅತೀ ದೊಡ್ಡ ಆಣೆಕಟ್ಟನ್ನು ಕಾವೇರಿ ನದಿಗೆ ಕಟ್ಟಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಅಂತೆಯೇ ಅವರನ್ನು **'ಆಧುನಿಕ ಮೈಸೂರು ರಾಜ್ಯದ ಶಿಲ್ಪಿ'** ಎಂದು ಕರೆಯುವರು. 1894 ರಲ್ಲಿ ಮೈಸೂರಿಗೆ ಸಮೀಪದ ಶಿವನ ಸಮುದ್ರ ಎಂಬಲ್ಲಿ ಏಷ್ಯ ಖಂಡದಲ್ಲಿಯೇ ಪ್ರಪ್ರಥಮ ಬಾರಿಗೆ ವಿದ್ಯುತ್ ಉತ್ಪಾದನಾ ಘಟಕವನ್ನು ನಿರ್ಮಿಸಿದರು. ಇವರ ಸೇವಾವಧಿಯಲ್ಲಿ ಅಸಂಖ್ಯ ಔದ್ಯೋಗಿಕ ಮಹತ್ತರ ಸಾಧನೆಗಳು ರೂಪಗೊಂಡವು. ಅವೆಲ್ಲವುಗಳಿಗೆ ಇವರೇ ಕಾರಣಕರ್ತರು. ಇವರ ದೂರದೃಷ್ಟಿತ್ವದ ಫಲವೇ ಇಂದಿಗೂ ಅಮರವಾಗಿ ಸಾಧನೆಗಳು ಉಳಿದಿವೆ. ಮೈಸೂರು ಸೋಪ್ ಫ್ಯಾಕ್ಟರಿ, ಭದ್ರಾವತಿ ಸ್ಟೀಲ್ ಫ್ಯಾಕ್ಟರಿ, ಎಸ್.ಜೆ.ಪಿ. ಪಾಲಿಟೆಕ್ನಿಕ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರು ಶುಗರ್ ಮಿಲ್ಸ್, ಇವೆಲ್ಲವೂ ಅವರ ಕರ್ತುತ್ವ ಶಕ್ತಿಯ ಫಲಗಳು.

ಇವರು ಮೈಸೂರಿನ 'ದಿವಾನ' ರಾಗಿದ್ದ ಸಂದರ್ಭದಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ಖಾಸಗಿಯವರು ಬಂಡವಾಳ ತೊಡಗಿಸಲು ಪ್ರೋತ್ಸಾಹ ನೀಡಿದರು.

ಇವರು ಪ್ರಾಮಾಣಿಕತೆಗೆ, ನಿಷ್ಠೆಗೆ, ವೇಳೆಯ ಮಹತ್ವಕ್ಕೆ, ಕಾರ್ಯಬದ್ಧತೆಗೆ, ತ್ಯಾಗ ಮನೋಭಾವಕ್ಕೆ ಹೆಸರುವಾಸಿಯಾಗಿದ್ದರು.

ತಿರುಮಲ–ತಿರುಪತಿಯ ರಸ್ತೆ ನಿರ್ಮಾಣದ ಸಂಪೂರ್ಣ ಯೋಜನೆ ಇವರದೇ ಆಗಿತ್ತು. ಈ ಕಾರ್ಯ ಸಮರ್ಥವಾಗಿ ನಿರ್ವಹಿಸಲು ಹೆಲಿಕಾಪ್ಟರ್ ಬಳಸಿ ಉಸ್ತುವಾರಿ ನೋಡಿದರು.

(ಮುಂದುವರಿಯುವುದು.....) –ಸ.ಸಂ.

ಕವಿಕಾ ಕನ್ನಡ ಸಂಘ

ನೊಂದಣಿ ಸಂಖ್ಯೆ : ೨೦೩/೧೫-೧೭

ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬.

ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ 1933 ರಲ್ಲಿ ಮೈಸೂರಿನ ಅರಸರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ದೂರದೃಷ್ಟಿಯ ಫಲವಾಗಿ ಆಗಿನ ದಿವಾನರಾಗಿದ್ದ ಶ್ರೀ ಸರ್ ಎಂ.ವಿಶ್ವೇಶ್ವರಯ್ಯ ಹಾಗೂ ಬ್ರಿಟಿಷ್ ಅಧಿಕಾರಿಯಾಗಿದ್ದ ಶ್ರೀ ಮಾರೀಸ್ ಫ್ರಡ್‌ಮನ್‌ರವರಿಂದ ಬೆಂಗಳೂರಿನ ಮೈಸೂರು ರಸ್ತೆಯ ವೃಷಭಾಬವರಿ ನದಿಯ ಪಕ್ಕದಲ್ಲಿ ಸ್ಥಾಪಿತವಾದ ವಿದ್ಯುತ್ ಪರಿವರ್ತಕಗಳ ತಯಾರಿಕಾ ಕಾರ್ಖಾನೆಯೇ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ (ಜಿ.ಇ.ಎಫ್).

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ (ಜಿ.ಇ.ಎಫ್)ಯು ಆರಂಭದ ದಿನಗಳಲ್ಲಿ ವಿವಿಧ ರೀತಿಯ ಪ್ರಾಡಕ್ಟ್‌ಗಳನ್ನು ತಯಾರು ಮಾಡುತ್ತಿದ್ದರೂ ಸಹ ವಿದ್ಯುತ್ ಪರಿವರ್ತಕಗಳ ತಯಾರಿಕೆಯು ಮುಖ್ಯವಾದ ಉತ್ಪಾದನೆಯಾಗಿತ್ತು ಭಾರತದಲ್ಲಿ ವಿದ್ಯುತ್ ಪರಿವರ್ತಕಗಳನ್ನು ಉತ್ಪಾದಿಸುವ ಮತ್ತು ಸರಬರಾಜು ಮಾಡುವ ಏಕೈಕ ಸರ್ಕಾರಿ ಕಾರ್ಖಾನೆಯಾಗಿತ್ತು ನಂತರದ ದಿನಗಳಲ್ಲಿ ಕನ್ನಡ ಚಳುವಳಿ ಹಾಗೂ ಕನ್ನಡಕ್ಕೆ ಹೆಚ್ಚಿನ ಸ್ಥಾನಮಾನ ಸಿಗವ ದೃಷ್ಟಿಯಿಂದ ಕನ್ನಡ ಆಂದೋಲನದ ಸಮಯದಲ್ಲಿ ಕನ್ನಡ ಸಂಘಗಳ ಕೋರಿಕೆಯಂತೆ 1975 ರಲ್ಲಿ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ (ಜಿ.ಇ.ಎಫ್.)ಯನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆ (ಕವಿಕಾ) ಎಂದು ಮರುನಾಮಕರಣ ಮಾಡಲಾಯಿತು.

ಕರ್ನಾಟಕ ವಿದ್ಯುತ್ ಕಾರ್ಖಾನೆಯು 11 ಕೆವಿಎ ಯಿಂದ 1600 ಕೆವಿಎ ಸಾಮರ್ಥ್ಯದವರೆಗೂ ವಿದ್ಯುತ್ ಪರಿವರ್ತಕಗಳನ್ನು ಉತ್ಪಾದನೆ ಮಾಡುವುದರ ಜೊತೆಗೆ ಎಲ್ಲಾ ರಾಜ್ಯಗಳ ವಿದ್ಯುತ್ ಮಂಡಳಿಗಳಿಗೂ ವಿದ್ಯುತ್ ಪರಿವರ್ತಕಗಳನ್ನು ಸರಬರಾಜು ಮಾಡಿರುವ ದಾಖಲೆ ಇದೆ. ಸುಮಾರು 87 ವರ್ಷಗಳ ಗಣನೀಯ ಇತಿಹಾಸ ಹೊಂದಿರುವ ಕಾರ್ಖಾನೆಯು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ 11 ಕೆವಿಎ, 25 ಕೆವಿಎ, 63 ಕೆವಿಎ, 100 ಕೆವಿಎ, 250 ಕೆವಿಎ, 500 ಕೆವಿಎ ಸಾಮರ್ಥ್ಯದ ಪರಿವರ್ತಕಗಳನ್ನು ತಯಾರಿಸುತ್ತದೆ.

ಕವಿಕಾ ಕಾರ್ಖಾನೆಯು ಉತ್ತಮವಾದ ಗುಣಮಟ್ಟ ಹಾಗೂ ದೀರ್ಘ ಬಾಳಿಕೆಗೆ ಹೆಚ್ಚು ಒತ್ತು ಕೊಡುತ್ತಿದೆ. ಕಾರ್ಖಾನೆಯಿಂದ ತಯಾರಿಸಿದ ಪರಿವರ್ತಕಗಳು ಸುಮಾರು 25 ವರ್ಷಗಳವರೆಗೂ ಬಾಳಿಕಿ ಬಂದಿರುವ ದಾಖಲೆಗಳು ಇವೆ. ರೈತಸ್ನೇಹಿ ಹಾಗೂ ಗ್ರಾಹಕ ಸ್ನೇಹಿಯಾದ ಪರಿವರ್ತಕಗಳು ಅಳವಡಿಕೆಯ ದೃಷ್ಟಿಯಿಂದಲೂ ತುಂಬಾ ಸುಲಭವಾಗಿದೆ.

ಪ್ರಸ್ತುತ 300 ಜನ ಉದ್ಯೋಗಿಗಳನ್ನು ಹೊಂದಿರುವ ಕಾರ್ಖಾನೆಯು ಗುಣಮಟ್ಟದ ಪರಿವರ್ತಕಗಳ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದ್ದು, ಒಂದು ತಿಂಗಳಿನಲ್ಲಿ 36500 ಪರಿವರ್ತಕಗಳನ್ನು ತಯಾರಿಸಿದ ದಾಖಲೆ ಇದೆ. ಉತ್ತಮ ಗುಣಮಟ್ಟ ಮತ್ತು ದೀಫೃ ಬಾಳಿಕೆಯ ಪರಿವರ್ತಕಗಳ ತಯಾರಿಕೆಗಾಗಿ ಇಂಟರ್ ನ್ಯಾಷನಲ್ ಸ್ಟಾಂಡರ್ಡ್ ಅರ್ಗನೈಜೇಶನ್ ಸಂಸ್ಥೆ (ಐ.ಎಸ್.ಓ) ಯಿಂದ ಐ.ಎಸ್.ಓ 9001 ಹಾಗೂ ಕರ್ನಾಟಕ ಸರ್ಕಾರದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 14001 ಪ್ರಮಾಣ ಪತ್ರವನ್ನು ಸಹ ಪಡೆದಿರುತ್ತದೆ. ಪರಿವರ್ತಕಗಳ ಸುಧಾರಿತ ಕ್ರಮವಾಗಿ 3 ಸ್ಟಾರ್, 4 ಸ್ಟಾರ್, 5 ಸ್ಟಾರ್ ಗುಣಮಟ್ಟ ಪರಿವರ್ತಕಗಳನ್ನು ತಯಾರಿಸಿ 2017ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರದಿಂದ "ಪವರ್ ಅವಾರ್ಡ್-2017"ನ್ನು ಪಡೆದ ಕಾರ್ಖಾನೆಯಾಗಿದೆ.

ಕಾರ್ಖಾನೆಯ ಪ್ರಸ್ತುತ ಇಂಧನ ಇಲಾಖೆಗೆ ಸೇರಿರುತ್ತದೆ. ಕರ್ನಾಟಕ ವಿದ್ಯುತ್ ಕಾರ್ಖಾನೆಯಲ್ಲಿ ಶೇ.95 ರಷ್ಟು ಜನ ಕನ್ನಡಿಗ ಉದ್ಯೋಗಿಗಳೇ ಇರುವುದರಿಂದ ಆಡಳಿತದಲ್ಲಿ ಕನ್ನಡ ಬಳಕೆ, ಕನ್ನಡ ಸಂಘಕ್ಕೆ ಹೆಚ್ಚಿನ ಸಹಾಯ, ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಶಸ್ತ್ಯಗಳನ್ನು ನೀಡುವುದರ ಜೋತೆಗೆ ಕನ್ನಡವನ್ನು ಬೆಳೆಸುವ ಕಾಯಕವನ್ನು ಮಾಡುತ್ತಾ ಕರ್ನಾಟಕದಲ್ಲಿ ಹೆಸರಾಂತ ಉದ್ಯಮವಾಗಿದೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ.

ಪ್ರಕಟಣೆ : ಕವಿಕಾ ಕನ್ನಡ ಸಂಘ

ಗಾಂಧೀಜಿ ಕುರಿತು
ನೊಬೆಲ್ ಪ್ರಶಸ್ತಿ ಪುರಸ್ಕೃತರ ಅನಿಸಿಕೆ

ಪಂಡಿತ್ ಜವಹರಲಾಲ್ ನೆಹರು
ಭಾರತದ ಪ್ರಥಮ ಪ್ರಧಾನ ಮಂತ್ರಿ

"ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು. ನಡೆದಲ್ಲಿ ಪವಿತ್ರ ಭೂಮಿಯಾಯಿತು".

"ಗಾಂಧೀಜಿ ಒಬ್ಬ ಪ್ರಚಂಡ ವ್ಯಕ್ತಿ. ತಮ್ಮ ಸದ್ಭಾವನ, ಬುದ್ಧಿಮತ್ತೆ, ದೂರದೃಷ್ಟಿ, ದಯಾಪರತೆ ಮತ್ತು ಮನಸ್ಸಿನ ಎಲ್ಲ ಭಾವನೆ, ಕಾಮವಾಸನೆಗಳನ್ನು ಹತ್ತಿಕ್ಕಿದ ಒಂದು ಆಧ್ಯಾತ್ಮಿಕ ಶಕ್ತಿ".

"ಗಾಂಧೀಜಿ ಅವರ ಜೀವನದ ಹಂತ ನೋಡಿದಾಗ ಸಾಮಾನ್ಯರಲ್ಲಿ ಸಾಮಾನ್ಯರಾಗಿ ತಪ್ಪು ಮಾಡುತ್ತಲೇ ಬದುಕು ರೂಪಿಸಿಕೊಂಡವರು"

"ನಿಶ್ಚೇತನ ದೇಹಕ್ಕೆ ಜೀವದುಸಿರು ಕೊಟ್ಟು ಅಂಗಾಂಗಗಳಿಗೆ ಚಲನಶಕ್ತಿ ಕೊಡುವ ಶುಭ್ರಗಾಳಿಯಂತೆ, ಕತ್ತಲೆ ಗಡಿಯೊಳಗೆ ತೂರಿ ಬಂದು ತನ್ನ ಕಣ್ಣು ಪೊರೆ ತೆಗೆದ ಬೆಳಕಿನ ಕಿರಣದಂತೆ ಅನೇಕ ವಸ್ತುಗಳನ್ನುರಿಸಿ ಜನಮನವನ್ನು ಅಲ್ಲೋಲ ಕಲ್ಲೋಲ ಮಾಡಿದ ಬಿರುಗಾಳಿಯಂತೆ ಗಾಂಧೀಜಿ ಬಂದರು. ಅವರು ಮೇಲಿನಿಂದ ಕೆಳಗಿಳಿದು ಬಂದವರಲ್ಲ. ಭಾರತದ ಜನಕೋಟಿಯ ಮಡಿಲಿನಿಂದ ಬಂದು ಅವರ ಭಾಷೆಯಲ್ಲೇ ಮಾತನಾಡಿ ಸದಾ ಅವರು ಮತ್ತು ಅವರ ದಾರುಣ ಸ್ಥಿತಿಯ ಕಡೆಗೆ ಬೆರಳು ತೋರಿಸಿ ದೃಷ್ಟಿ ಇಟ್ಟವರು."

"ನಮ್ಮ ಹೃದಯವನ್ನೇ ಹೊಡೆಯುವಂತಹ ಈ ನಿರಾಶಾದಾಯಕ ಸ್ಥಿತಿಯಲ್ಲಿ ಒಂದು ಭರವಸೆ ಎಂದರೆ ಗಾಂಧಿ ಅಂತಹ ವ್ಯಕ್ತಿಯನ್ನು ಹುಟ್ಟು ಹಾಕಿದ ಶಕ್ತಿಶಾಲಿ ಭೂಮಿ ನಮ್ಮದು. ಇನ್ನೊಬ್ಬ ಗಾಂಧಿ ಇನ್ನೂ ಒಂದು ಸಾವಿರ ವರ್ಷಗಳ ನಂತರ ಹುಟ್ಟುವುದು. ಸದ್ಯಕ್ಕೆ ಗಾಂಧಿಯವರು ತಮ್ಮ 70 ವರ್ಷಗಳ ಅನುಭವದಿಂದ ಕೊಟ್ಟಿರುವ ಮಾರ್ಗದರ್ಶನದಿಂದ ನಮ್ಮ ಬದುಕನ್ನು ರೂಪಿಸಿಕೊಳ್ಳೋಣ. ಅವರು ನಮ್ಮನ್ನು ಹೊಸ ಗುರಿಯತ್ತ ಕೊಂಡೊಯ್ಯುತ್ತಾರೆಯೇ ಹೊರತು ಭ್ರಮಾ ಲೋಕದ ಕಡೆಗಲ್ಲ."

"ಗಾಂಧೀಜಿ ಈ ಮಣ್ಣಿನ ಮನಷ್ಯನಲ್ಲ, ಆತ ತುಂಬಾ ಅಪರೂಪದ ಕಮ್ಮಟದಲ್ಲಿ ವಿಶೇಷ ವಸ್ತುವಿನಿಂದ ಎರಕಗೊಂಡ ವ್ಯಕ್ತಿ".

ಡಾ॥ ಎಸ್. ರಾಧಾಕೃಷ್ಣನ್
ಭಾರತದ ಎರಡನೆ ರಾಷ್ಟ್ರಪತಿ

"ಗಾಂಧೀಜಿ ಅವರ ಹಿರಿಮೆಗಳಿಗೆ ಕಾರಣ ಅವರ ಪವಿತ್ರಮಯ ಜೀವನವೇ ಹೊರತು, ಅವರ ಪೌರುಷದಾಯಕ ಹೋರಾಟವಲ್ಲ."

"ಆತ್ಮದ ವಿಭೂತಿ ಹಾಗೂ ದರ್ಶನದ ದೃಷ್ಟಿಯಿಂದ ಅಳೆದಲ್ಲಿ ನೂರಾ ನಲವತ್ತು ಪೌಂಡ್ ತೂಕದ ಈ ನರಪೇತಲ ಮಾನವರಲ್ಲಿಯೇ ಅತ್ಯಂತ ಪ್ರಚಂಡ ವ್ಯಕ್ತಿ. ತಮ್ಮದೇ ಆದ ರೀತಿಯಲ್ಲಿ ತಮ್ಮ ದೇಶ ಕಾಲಗಳಲ್ಲಿ ಹಿರಿಯರೂ ಆದ ಅತ್ಯಂತ ಪ್ರಮುಖ ಪ್ರಸಿದ್ಧ ವ್ಯಕ್ತಿಗಳು. ಈತನ ಪಕ್ಕದಲ್ಲಿ ನಿಂತಾಗ ಕಿರಿಯರೂ, ನಗಣ್ಯರೂ ಆಗಿ ಪರಿಣಮಿಸುತ್ತಾರೆ.'

"ಎಲ್ಲಕ್ಕೂ ಮಿಗಿಲಾಗಿ ಅವರು ಧರ್ಮದ ಅರ್ಥ ಹಾಗೂ ಮೌಲ್ಯದ ಬಗ್ಗೆ ನಮ್ಮ ಪ್ರಜ್ಞೆಯನ್ನು ಪುನರುಜ್ಜೀವನ ಗೊಳಿಸಿದವರು ಹಾಗೂ ಅದನ್ನು ಹೊಸತುಪಡಿಸಿದವರು. ಗಾಂಧೀಜಿ ಅವರಲ್ಲಿ ಸರ್ವಗ್ರಾಹ್ಯ ಬುದ್ಧಿ ಶಕ್ತಿಯಾಗಲಿ ಅಥವಾ ಹೊಸದೊಂದು ದರ್ಶನ ಅಥವಾ ಹೊಸದೊಂದು ಧರ್ಮದ ರಚನೆಗೆ ಅಗತ್ಯವಾದಂತಹ ಭಾವನಾ ಸಂಪತ್ತಾಗಲಿ ಇರದಿದ್ದಾಗ್ಯೂ ಅವರ ನೈತಿಕ ಶಕ್ತಿಯ ಪ್ರೇರಣೆ ಹಾಗೂ ಅದರ ಪರಿಶುದ್ಧತೆ ಇವು ಸ್ಪಷ್ಟವಾಗಿಯೂ ಅವರಲ್ಲಿದ್ದ ಆಳವಾದ ಧಾರ್ಮಿಕ ಮನೋಭಾವಗಳಿಂದ ಉತ್ಪತ್ತಿಯಾದವು."

ಕವಿಪ್ರನಿ ಕಾರ್ಯಾಲಯದಲ್ಲಿ 75ನೇ ಸ್ವಾತಂತ್ರ್ಯ ದಿನಾಚರಣೆ

ಜ್ಯೋತಿ ಬೆಳಗುತಿದೆ

ಸ್ವಾತಂತ್ರ್ಯ ದಿನಾಚರಣೆಯ ಸಂದೇಶ

"ಕೋವಿಡ್-19 ರ ಕೆಲಸದಲ್ಲಿ ಸಹಕರಿಸಿದ ತಮಗೆಲ್ಲ ಅಭಿನಂದನೆಗಳು"

ಡಾ॥ ಎನ್.ಮಂಜುಳ ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ

75ರ ಸಾಲಿನ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣಗೊಳಿಸಿದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಮಾತನಾಡುತ್ತಾ, ಕೋವಿಡ್-19 ನಂತರ ನಾವು ಆಚರಿಸುತ್ತಿರುವ 2ನೇ ಸ್ವಾತಂತ್ರ್ಯ ದಿನ ಇದಾಗಿದೆ. ಇಲ್ಲಿಯವರೆಗೆ ಕೋವಿಡ್ ಭಯ ಇದದ್ದು ಈಗ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಿದೆ. ಬಹುತೇಕರು ಲಸಿಕೆ ಪಡೆದಿದ್ದಾರೆ. ಕೋವಿಡ್‌ನಿಂದ ನಮ್ಮ ಮಧ್ಯ ಇಲ್ಲದಂತಾಗಿರುವ ಅಧಿಕಾರಿಗಳು ಮತ್ತು ನೌಕರರನ್ನು ನೆನಪಿಸಿಕೊಳ್ಳಬೇಕಾಗಿದೆ.

ನಾವು ಸ್ವತಂತ್ರ್ಯವಾಗಿ ದೇಶ ಆಳುವ ಹಕ್ಕು ಪಡೆದಿದ್ದೇವೆ. ಆದರೆ ಜವಾಬ್ದಾರಿ ಅರಿತು ಕೆಲಸ ಮಾಡಬೇಕು. ಮೇ-ಜೂನ್ ನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಕೋವಿಡ್‌ನ ಜವಾಬ್ದಾರಿ ನಿಭಾಯಿಸಿದ್ದೇವೆ. ಈ ಕೆಲಸದಲ್ಲಿ ಸಹಕರಿಸಿದವರೆಲ್ಲರಿಗೂ ಅಭಿನಂದಿಸುತ್ತೇನೆ.

ಕೋವಿಡ್ 2ನೇ ಅಲೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ತೊಡಗಬೇಕಾಗಿತ್ತು. 3ನೇ ಅಲೆಯನ್ನು ನಿಭಾಯಿಸಲು ಸಜ್ಜಾಗಿದ್ದೇವೆ. ಜಿಲ್ಲಾ ವ್ಯಾಪ್ತಿಯಲ್ಲಿ ಎಚ್ಚರ ವಹಿಸಬೇಕಾದ ಅಗತ್ಯವು ಸಹ ಇದೆ ಎಂದರು.

"ಸರಕಾರಿ ನೌಕರರಾದ ನಾವು ಅಧಿಕಾರ ಬಳಸಿ ಉತ್ತಮ ಜನ ಸೇವೆ ಮಾಡಬೇಕು"

ಶ್ರೀ ಮಹೇಶ್ ಕರ್ಜಗಿ, ಕ.ಆ.ಸೇ (ಹಿ.ಶ್ರೇ)
ನಿರ್ದೇಶಕರು (ಆಡಳಿತ ಮತ್ತು ಮಾ.ಸಂ)

ಎಲ್ಲರಿಗೂ ಸ್ವಾತಂತ್ರ್ಯ ದಿನದ ಶುಭಾಶಯಗಳು.

ನಮ್ಮ ಮಹನೀಯರು ನಮಗೆ ಸ್ವಾತಂತ್ರ್ಯ ತಂದುಕೊಟ್ಟಿದ್ದಾರೆ. ಅವರನ್ನು ನೆನೆಯಬೇಕಾದ್ದು ನಮ್ಮೆಲ್ಲರ ಕರ್ತವ್ಯ. ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಗಣ್ಯರಲ್ಲಿ ಪ್ರಮುಖವಾಗಿ, ಟಿಪ್ಪು ಸುಲ್ತಾನ್, ಹಡಗಲಿ ಬೇಡರು, ಸಂಗೊಳ್ಳಿ ರಾಯಣ್ಣ ರವರು ಪ್ರತಿ ಹಂತದಲ್ಲೂ ದೇಶಕ್ಕಾಗಿ ಹೋರಾಡಿದರು. ಗಾಂಧಿಜೀಯವರ ನೇತೃತ್ವದಲ್ಲಿ ದಂಡಿಮಾರ್ಚ್, ಕ್ವಿಟ್ ಇಂಡಿಯಾ ಚಳವಳಿ ನಡೆಯಿತು. ಅಂಕೋಲದಲ್ಲಿ ದಂಡಿಮಾರ್ಚ್ ಪ್ರಯುಕ್ತ ಉಪ್ಪು ತಯಾರಿಸಲಾಯಿತು. ಈ ಸಂದರ್ಭದಲ್ಲಿ ಹೋರಾಟಗಾರರಿಗೆ ಗೌರವ ಸಲ್ಲಿಸಬೇಕು ಮತ್ತು ಅವರನ್ನೆಲ್ಲ ಸ್ಮರಿಸಬೇಕು. ಕೋಟ್ಯಾಂತರ ಜನಸಂಖ್ಯೆಯಲ್ಲಿ ಕೆಲವೇ ಜನ ಮಾತ್ರ ಸರಕಾರಿ ನೌಕರರು ಇದ್ದೇವೆ, ಅದು ನಮ್ಮ ಪುಣ್ಯ. ಹೀಗಾಗಿ ನಾವು ಉತ್ತಮ ಜನ ಸೇವೆ ಕೈಗೊಳ್ಳಬೇಕು. ನಮ್ಮ ಅಧಿಕಾರ ಹಾಗೂ ಸ್ವಾತಂತ್ರ್ಯವನ್ನು ಬಳಸಿ ದೇಶದ ಅಭಿವೃದ್ಧಿಗೆ ಕಾಣಿಕೆ ಸಲ್ಲಿಸಬೇಕು ಎಂದರು.

"ವಿದ್ಯುತ್ ಇಲ್ಲದೇ ಜೀವನವೇ ಇಲ್ಲ"

ಶ್ರೀ ಸಿದ್ಲಿಂಗಪ್ಪ ತೇಲಿ
ನಿರ್ದೇಶಕರು (ಹಣಕಾಸು) ಕವಿಪ್ರನಿನಿ

ಕರೋನ ವರ್ತುಲದಿಂದ ಹೊರ ಬಂದರೂ ಅನೇಕರನ್ನು ಕಳೆದುಕೊಂಡಿದ್ದೇವೆ. ಸ್ವಾತಂತ್ರ್ಯಕ್ಕಾಗಿ ಹಲವರ ತ್ಯಾಗ ಬಲಿದಾನಗಳಿಂದ ಭಾರತ ವಿಶ್ವದ ಏಳನೇ ಶಕ್ತಿ ಶಾಲಿ ರಾಷ್ಟ್ರವಾಗಿದೆ. ಅಮೇರಿಕ, ಚೀನಾ ಆರ್ಥಿಕತೆ ದೊಡ್ಡದಿದೆ. ಇವುಗಳ ಜೀವನಾಡಿ ವಿದ್ಯುತ್. ವಿದ್ಯುತ್ ಇಲ್ಲದೆ ಜೀವನವೇ ಇಲ್ಲ ಎಂಬಂತಾಗಿದೆ. ಅಗತ್ಯ ಸೇವೆಯ ಇಲಾಖೆ ನಮ್ಮದು, ನಮಗೆ ಮಹತ್ತರವಾದ ಜವಾಬ್ದಾರಿ ಇದೆ.

75 ವರ್ಷಗಳಿಂದ ಅತ್ಯಂತ ಹಿಂದುಳಿದಿದ್ದ ಭಾರತ, ಈಗ 4ನೇ ಅತೀ ದೊಡ್ಡ ರಾಷ್ಟ್ರವಾಗಿ ಆರ್ಥಿಕವಾಗಿ ಬೆಳೆದಿದೆ. ಮುಂದೆ ಸುಭದ್ರ ರಾಷ್ಟ್ರವಾಗಬೇಕಾದ ಅಗತ್ಯ ಇದೆ.

ಸ್ವಾತಂತ್ರ್ಯ ದಿನಾಚರಣೆಯ ಸುದ್ದಿ ಚಿತ್ರಗಳು

75ನೇ ಸ್ವಾತಂತ್ರ್ಯ ದಿನಾಚರಣೆ

– ಡಾ. ಎ.ಆರ್.ಗೋವಿಂದಸ್ವಾಮಿ
ಸಹ ಸಂಪಾದಕರು

ಎಲ್ಲರಿಗೂ 75ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು. ವ್ಯಾಪಾರಕ್ಕಾಗಿ ಬಂದ ಬ್ರಿಟಿಷರು ನಮ್ಮನ್ನು ದಾಸ್ಯಕ್ಕೆ ತಳ್ಳಿದ್ದರು. 1857 ರಿಂದ 1947 ರವರೆಗೆ ನಮ್ಮ ದೇಶದ ಸ್ವಾತಂತ್ರಕ್ಕಾಗಿ ಲಕ್ಷಾಂತರ ಜನ ತಮ್ಮ ಜೀವವನ್ನೇ ತೆತ್ತಿದರು.

1, ಆಗಸ್ಟ್ 15, 1947 ರಂದು ಎಲ್ಲರ ತ್ಯಾಗ ಬಲಿದಾನಗಳಿಂದ ನಾವು ಸ್ವಾತಂತ್ರ್ಯ ಪಡೆದೆವು. ಎಲ್ಲಾ ರೀತಿಯ ಮೂಲಭೂತ ಹಕ್ಕುಗಳು ನಮ್ಮವಾದವು. ಈ ದಿನ ದೇಶದ ಜನ ಒಗ್ಗಟ್ಟಾಗಿ ಬದುಕಬೇಕು ಎಂದು ಸಾರುವ ದಿನವಾಗಿದೆ. ಭಾರತವು ಎಲ್ಲ ಕ್ಷೇತ್ರಗಳಲ್ಲೂ ಇಂದು ಎತ್ತರದ ಸಾಧನೆ ಮಾಡಿದೆ. ವಿಶೇಷವಾಗಿ ಶಿಕ್ಷಣ, ವಿದ್ಯುತ್ ಕ್ಷೇತ್ರ, ವಿಜ್ಞಾನದಲ್ಲಿ ಹೀಗೆ ನೂರಾರು ಕ್ಷೇತ್ರದಲ್ಲಿ ಕೊಡುಗೆ ನೀಡಿದೆ. ದೇಶದಲ್ಲೇ ಉದ್ಯೋಗ ಸೃಷ್ಟಿ ಸಾಧಿಸಿದೆ. ನಮ್ಮ ಸ್ವಾತಂತ್ರ್ಯ ನೆಲದಲ್ಲಿ ಶುದ್ಧ ಗಾಳಿ, ಆರೋಗ್ಯ ಪೂರ್ಣವಾದ ಆಹಾರ ಕೊಟ್ಟಿದೆ ದೇಶ.

ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಗ್ರೀಕರು ವ್ಯಾಪಾರದ ನೆಪದಲ್ಲಿ ಭಾರತಕ್ಕೆ ನುಸುಳಿ, ನಮ್ಮ ದೌರ್ಬಲ್ಯವನ್ನೇ ಬಂಡವಾಳ ಮಾಡಿಕೊಂಡು, ನಮ್ಮನ್ನೆಲ್ಲ ಭಿನ್ನ ಭಿನ್ನ ಕಾರಣಕ್ಕಾಗಿ ಒಡೆದು ಆಳಿದರು. ದೇಶದ ಎಲ್ಲಾ ಜನರು ಅವರ ದಾಸರಾಗಬೇಕಾಯಿತು. ಹೀಗೆ ನಮ್ಮನ್ನು ಸತತ 200 ವರ್ಷಗಳ ಕಾಲ ಆಳಿದರು. ನಮ್ಮ ಮೇಲೆ ದೌರ್ಜನ್ಯ ಎಸಗಿ ಮೆರೆದರು. ನಮ್ಮೆಲ್ಲರ ಸ್ವಾತಂತ್ರ್ಯಕ್ಕಾಗಿ ಪ್ರಪ್ರಥಮವಾಗಿ ಬ್ರಿಟಿಷರ ವಿರುದ್ಧ ಪ್ರತಿಭಟಿಸಿದ ವ್ಯಕ್ತಿ **ಮಂಗಲ್ ಪಾಂಡೆ**. ಈ ಒಬ್ಬ ವೀರ ಹೋರಾಟಗಾರನ ಧೈರ್ಯ ಇಡೀ ದೇಶದ ಜನರಿಗೆ ಹೋರಾಡುವ ಕಿಚ್ಚು ಹಚ್ಚಿತು. ಎಲ್ಲ ಜನರು ತಮ್ಮ ಹಕ್ಕಿಗಾಗಿ, ಉಳವಿಗಾಗಿ, ಸ್ವಾತಂತ್ರ್ಯಕ್ಕಾಗಿ 1857 ರಿಂದ 1947 ರವರೆಗೆ ಸತತ ಒಗ್ಗಟ್ಟಾಗಿ ಹೋರಾಡಿ ಪ್ರಾಣವನ್ನೇ ಪಣಕ್ಕಿಟ್ಟು ಬೃಹತ್ ಹೋರಾಟ ಮತ್ತು ಚಳವಳಿ ಕಟ್ಟಿದರು. ಅಂತಹ ಮಹಾನ್ ಸ್ವಾತಂತ್ರ್ಯ ವೀರರನ್ನು, ಮನ ತುಂಬಿ **"ನೆನೆಯೋ ಆ ಜನವ"** ಎಂದು ಹೇಳಲು ಇಂದು ನಾವು ರಾಷ್ಟ್ರೀಯ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದೇವೆ. ಇದು ಸ್ವಾಭಿಮಾನದ ಒಗ್ಗಟ್ಟಿನ ಹಾಗೂ ಅಭಿವೃದ್ಧಿಯ ಸಂಕೇತವಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ **"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು"** ಎಂದು ಗುಡುಗಿದರು **ಬಾಲಗಂಗಾಧರ ತಿಲಕ್**

"ನೀವು ನನಗೆ ನಿಮ್ಮ ರಕ್ತ ಕೋಡಿ ನಾನು ನಿಮಗೆ ಸ್ವಾತಂತ್ರ್ಯ ಕೊಡುತ್ತೇನೆ" ಎಂದು **ಸುಭಾಶ್ ಚಂದ್ರಬೋಸರು** ಹೇಳಿದರೆ. **"ನಾವು ಶಾಂತಿ ಮಾರ್ಗದಲ್ಲಿ ಸ್ವಾತಂತ್ರ್ಯ ಪಡಿಯಬೇಕು ಇಲ್ಲವೇ ಮಡಿಬೇಕು"** ಎಂದು **ಮಹತ್ಮ ಗಾಂಧಿಜೀಯವರು** ಧರಣಿ ಕುಳಿತು ವಿಶ್ವಕ್ಕೆ ಶಾಂತಿ ಮತ್ತು ಅಹಿಂಸೆಯ ಪಾಠ ಹೇಳಿದರು. 1930 ರ ಐತಿಹಾಸಿಕ ದಂಡಿಯಾತ್ರೆ ಕೈಗೊಂಡರು. (ಇದಕ್ಕೆ ಸೆಪ್ಟೆಂಬರ್ 7ಕ್ಕೆ 100 ವರ್ಷ ಪೂರೈಸಿದೆ) **"ವಂದೇ ಮಾತರಂ"** ಗೀತೆಯನ್ನು ಅಂದು **'ಬಂಕಿಮ ಚಂದ್ರ ಚಟರ್ಜಿ'** ರವರು ರಚಿಸಿದರು.

ನಮ್ಮ ಮಹಿಳಾ ಹೋರಾಟಗಾರರು ಯಾರಿಗೂ ಕಡಿಮೆ ಇಲ್ಲದಂತೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. 1) ಝಾನ್ಸಿರಾಣಿ ಲಕ್ಷ್ಮಿಬಾಯಿ 2) ಕಿತ್ತೂರರಾಣಿ ಚೆನ್ನಮ್ಮ 3) ಓನಕೆ ಒಬವ್ವ 4) ರಾಣಿ ಅಬಾಕ್ಕ ಮುಂತಾದವರು. ಹೆಚ್ಚು ಚಾಲ್ತಿಯಲ್ಲಿಯೇ ಇಲ್ಲದ ಎಲೆಮರೆ ಕಾಯಿಯಂತಹ ಮಹಿಳಾ ಸ್ವಾತಂತ್ರ್ಯ ಹೋರಾಟಗಾರರಾದ 1) ಪಣಜೀಕರ ಕೃಷಬಾಯರು 2) ಸಾಂಬ್ರಾಣಿ ಯಲ್ಲಮ್ಮ 3) ಪಾಟೀಲ ನಾಗಮ್ಮ 4) ಕುಂದಾಪುರ ಉಮಾ ಬಾಯರು ಅವರಂತಹ ನೂರಾರು ಜನರು ಅಲ್ಲದೆ ಚಂದ್ರಶೇಖರ ಆಜಾದ್, ಭಗತ್ ಸಿಂಗ್, ರಾಜಗುರು, ಮೇಜರ್ ಜಿ.ಎಸ್.ಧಿಲನರು, ಮೇ.ಜ ತಹಾನವಾಜರು, ಖುದಿರಾಂ ಬೋಸ್‌ರಂತಹ ಮಹಾನ್ ವೀರರ ತ್ಯಾಗ-ಬಲಿದಾನ ದೊಡ್ಡದು ಇದಕ್ಕೆ ಬೆಲೆ ಕಟ್ಟಲಾಗದು. ಪಕ್ಕದ ರಾಜ್ಯವಾದ ಆಂಧ್ರದಲ್ಲಿ ಅಲ್ಲೂರಿ ಸೀತಾ ರಾಮರಾಜು ಅವರಂತಹವರು "ಜಾತಿ ಕೀ ಉಪರಿ ಸ್ವಾತಂತ್ರ್ಯಂ" ಎಂದು ಕೂಗು ಮೂಳಗಿಸಿದರೆ, ಕೇರಳದಲ್ಲಿ **"ಸ್ವಾತಂತ್ರ್ಯ ನಮ್ಮ ಜನ್ಮ ಸಿದ್ಧ ಹಕ್ಕು"** ಎಂದು ಘರ್ಜಿಸಿದರು, ಉತ್ತರ ಭಾರತದಲ್ಲಿ **"ಅಜಾದಿ ಹಮಾರ ಅಧಿಕಾರ್ ಹೈಂ"** ಎಂದು ಘೋಷಣೆ ಮೊಳಗಿತು. "Freedom is not Given, it is taken" ಎಂದು ಸುಭಾಷ್ ಚಂದ್ರ ಬೋಸ್ ಅವರು ಹೋರಾಡಿದರು. ನಮಗೆ 15, ಆಗಸ್ಟ್ 1947 ರಲ್ಲಿ ಸ್ವಾತಂತ್ರ್ಯ ಬಂದರೆ, 16, ಆಗಸ್ಟ್ 1947 ರಲ್ಲಿ ಬಾಂಬೆಯಲ್ಲಿ 25 ಸಾವಿರ ಜನರ ಮುಂದೆ "ಈ ಸ್ವಾತಂತ್ರ್ಯ ದಿನ ಸುಳ್ಳದೆ, ಜನರು ಇನ್ನೂ ಹಸಿವಿನಲ್ಲಿದ್ದಾರೆ, ಶೋಷಣೆಯಲ್ಲಿದ್ದಾರೆ, ನಿಜವಾದ ಸ್ವಾತಂತ್ರ್ಯ ಮುಂದಿದೆ" ಎಂದು ಲೋಕ ಸಾಹಿ ಅಣ್ಣಾಬಾಹುಸಾಠೆ ಎಂಬ, ಅವಿದ್ಯಾವಂತ ಲೇಖಕರು ಕೂಗುತ್ತಾರೆ. (ಇವರು 25ಕ್ಕೂ ಹೆಚ್ಚಿನ ಕೃತಿಗಳ ಕರ್ತೃ ಕೂಡ).

ಏ ಆಜಾದಿ ಝೂಟಿ ಹೈ, ದೇಶ್ ಕೀ ಜಂತಾ ಭೂಕಿ ಹೈಂ" ಎಂದು ಇವರು ಮತ್ತೆ ಮತ್ತೆ ಘರ್ಜಿಸುತ್ತಾರೆ. ಈ ಘರ್ಜನೇ ಇಂದಿಗೂ ಕೇಳಿ ಬರುತ್ತಿದೆ. ಈ ಬಗ್ಗೆಯೂ ಗಂಭೀರ ಚಿಂತನೆ ಸಹ ಅಗತ್ಯ. **"ಯಾರಿಗೆ ಬಂತು ಎಲ್ಲಿಗೆ ಬಂತು 47 ರ ಸ್ವಾತಂತ್ರ್ಯ ಟಾಟಾ ಬಿರ್ಲಾರ ಹೆಜ್ಜಿಗೆ ಬಂತು ಜನಗಳು ತಿನ್ನುವ ಬಾಯಿಗೆ ಬಂತು"** ಎಂದು ಹೋರಾಟದ ಕವಿಗಳು ಬರೆಯುತ್ತಲೇ ಇದ್ದಾರೆ. ಜಾತಿ-ಮತ ಪಂಥದ ಹೆಸರಿನಲ್ಲಿ ಬೇಧ ಮಾಡದೆ ಸಮಾಜದಲ್ಲಿ ಸಮಾನತೆ, ತರಬೇಕು. ಸಮಾನ ಶಿಕ್ಷಣದ ಜಾರಿಗೆ ಶ್ರಮಿಸಬೇಕು. ಭಾತೃತ್ವದ ಬಾಳ್ವೆಗೆ ಮನ್ನಣೆ ಕೊಡಬೇಕು. ಈ ದಿನ ಶಾಂತಿಯುತ ಹೋರಾಟದಿಂದ ನಮಗೆ ದಾಸ್ಯದಿಂದ ಮುಕ್ತಿಗೋಳಿಸಿದ ಮಹಾತ್ಮಗಾಂಧಿ, ಸುಭಾಸ್ ಚಂದ್ರಬೊಸ್, ಚಂದ್ರಶೇಖರ ಆಜಾದ್, ಭಗತ್‌ಸಿಂಗ್, ರಾಜ್‌ಗುರು, ಖುದಿರಾಂಬೋಸ್, ಮಂಗಲಪಾಂಡೆ, ಝಾನ್ಸಿರಾಣಿಯವರಂತವರನ್ನು ನೆನೆಯುವ ಸುಧಿನವಾಗಿದೆ. ನಾವೆಲ್ಲ ಸದಾ ಸ್ವಾತಂತ್ರ್ಯದಿಂದ, ಸರಕಾರದ ವ್ಯವಸ್ಥೆಯಲ್ಲಿಯೇ ಬದುಕಬೇಕಾದರೆ ಅತೀ ಶ್ರಮ, ಶ್ರದ್ಧೆ, ಅಭಿಮಾನದಿಂದ ದುಡಿದು, ದೇಶವನ್ನು ಶ್ರೀಮಂತಗೊಳಿಸಿ ನಾವು ಶ್ರೀಮಂತ ಜೀವನ ಸಾಧಿಸಬೇಕು. ಏನೇ ಆದರೂ ನಮ್ಮ ರಾಷ್ಟ್ರಗೀತೆ ಜನಮನ ಹಾಡುವುದೇ ನಮಗೆ ಹೆಮ್ಮೆ, ಧೈರ್ಯ, ಸಂಭ್ರಮ, ಖುಷಿ ಹುಮ್ಮಸ್ಸಾಗಿದೆ. ಇಂದಿಗೂ ಜನ ದೇಶದ ಮಣ್ಣನ್ನು ನೆತ್ತಿಗೆ ಹಚ್ಚಿಕೊಂಡು ಪುಣ್ಯ ಪಡೆಯುತ್ತಾರೆ. ಇದಕ್ಕೆ ಸ್ವಾಮಿ ವಿವೇಕಾನಂದರು ಹೊರತಲ್ಲ.

> ನಮ್ಮ ರಾಷ್ಟ್ರ ಪ್ರೇಮ ಒಂದು ದಿನಕ್ಕೆ ಸೀಮಿತವಾಗಬಾರದು. ತೋರ್ಪಡಿಕೆಯಾಗಬಾರದು ಸದಾ ಅಭಿಮಾನ ಭಕ್ತಿಯಿಂದ ನೋಡಬೇಕು. ನಮ್ಮ ದೇಶದ ಹೆಸರನ್ನು ಉಜ್ವಲಗೊಳಿಸಲು ಪಣ ತೊಡಬೇಕು. ಈ ಸಂದರ್ಭದಲ್ಲಿ ದೇಶದ ಜನರ ಪ್ರಗತಿ ನಮ್ಮೆಲ್ಲರ ಹೊಣೆಯಾಗಬೇಕು. ಸಮಾನತೆ ಮಂತ್ರವಾಗಬೇಕು.

ಜ್ಯೋತಿ ಬೆಳಗುತಿದೆ

ತೆರೆದ-ಅಂಚೆ

ಆಂತರಿಕ ಪ್ರಸಾರಕ್ಕಾಗಿ ಮಾತ್ರ

"Jyothi Belaguthide"

A House Journal of KPTCL

ಮಾನ್ಯ ಇಂಧನ ಸಚಿವರಾದ ಶ್ರೀ ಸುನೀಲ್‌ಕುಮಾರ್ ರವರಿಂದ ಪ್ರಗತಿ ಪರಿಶೀಲನಾ ಸಭೆ
ಚಿತ್ರದಲ್ಲಿ (ಎಡದಿಂದ) ಶ್ರೀ ಮಹೇಶ್ ಕರ್ಜಗಿ, ಕ.ಆ.ಸೇ., ನಿರ್ದೇಶಕರು (ಆಡಳಿತ ಮತ್ತು ಮಾ.ಸಂ.)
ಶ್ರೀ ಸಿದ್ಲಿಂಗಪ್ಪ ತೇಲಿ, ನಿರ್ದೇಶಕರು (ಹಣಕಾಸು), ಕವಿಪ್ರನಿನಿ, ಶ್ರೀ ಜಿ.ಕುಮಾರ ನಾಯಕ್, ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ
ಮಾನ್ಯ ಇಂಧನ ಸಚಿವರಾದ ಶ್ರೀ ಸುನೀಲ್‌ಕುಮಾರ್, ಡಾ. ಎನ್.ಮಂಜುಳ, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ
ಶ್ರೀ ಜಿ.ಆರ್. ಚಂದ್ರಶೇಖರಯ್ಯ, ನಿರ್ದೇಶಕರು (ಪ್ರಸರಣ), ಶ್ರೀ ಜಿ.ಮಂಜಪ್ಪ, ಅಧ್ಯಕ್ಷರು, ಲೆಕ್ಕಾಧಿಕಾರಿಗಳ ಸಂಘ

ಪತ್ರಿಕಾ ಸುದ್ದಿಗಾಗಿ : ಸಹ ಸಂಪಾದಕ, ಸಾರ್ವಜನಿಕ ಸಂಪರ್ಕಾಧಿಕಾರಿ ಶಾಖೆ

ಕವಿಪ್ರನಿನಿ, ಕೆಂಪೇಗೌಡ ರಸ್ತೆ, ಕಾವೇರಿ ಭವನ, ಬೆಂಗಳೂರು-9.

ಮೊಬೈಲ್ : 9448462620 (ಬೆಳಿಗ್ಗೆ 10.00 ರಿಂದ ಸಂಜೆ 5.30 ರವರೆಗೆ ಮಾತ್ರ) ಕಛೇರಿ : ದೂರವಾಣಿ ಮತ್ತು ಫ್ಯಾಕ್ಸ್ : 080-22245349

email : belaguthidejyothikptcl@gmail.com